**ಪಿ.ಡಬ್ಲ್ಯು-01**

**ಸಾಕ್ಷಿಯನ್ನು ದಿನಾಂಕಃ 14.06.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಂ.ಎನ್.ಆರ್. ವಕೀಲರಿಂದಃ**

ಮೃತ 1 ನೇ ವಾದಿ ಯಾವ ಪರಿಹಾರ ಕೋರಿ ದಾವೆ ಸಲ್ಲಿಸಿರುತ್ತಾರೆಂದು ತಿಳಿದುಕೊಂಡಿರುತ್ತೇನೆ. ದೊಡ್ಡಮರಚನಾಯಕರವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ದೊಡ್ಡಮರಚನಾಯಕರವರಿಗೆ ಬಸವನಾಯಕ ಎಂಬ ಒಬ್ಬನೇ ಮಗ ಇದ್ದನು. ದೊಡ್ಡಮರಚನಾಯಕರವರಿಗೆ ಬಸವನಾಯಕ ಎಂಬ ಮಗ ಇದ್ದ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ದೊಡ್ಡಮರಚನಾಯಕರವರು ಅವರ ತಂದೆಗೆ ಒಬ್ಬನೇ ಮಗನಾಗಿರುತ್ತಾನೆ. ನನ್ನ ಗಂಡನ ಹೆಸರು ಚಿಕ್ಕಚೆನ್ನನಾಯಕ ಆಗಿರುತ್ತಾರೆ. ನನಗೆ ಮದುವೆಯಾಗಿ ಸುಮಾರು 50 ವರ್ಷವಾಗಿರುತ್ತದೆ. ನೇರಳೆ ಗ್ರಾಮದ ಕೊಮ್ಮನಾಯಕ ಎಂಬುವವರು ನನಗೆ ಗೊತ್ತು. ಸದರಿ ಕೊಮ್ಮನಾಯಕರವರಿಗೆ 03 ಜನ ಗಂಡು ಮಕ್ಕಳು ಮತ್ತು 03 ಜನ ಹೆಣ್ಣು ಮಕ್ಕಳು ಇದ್ದರು. ಕೊಮ್ಮನಾಯಕರವರ ಮಗ ಬಿಳಿ ನಾಯಕರವರ ಹೆಂಡತಿ ಪ್ರತಿವಾದಿ ಪಾರ್ವತಮ್ಮ ಆಗಿರುತ್ತಾರೆಂದರೆ ಸರಿ. ಸದರಿ ಕೊಮ್ಮನಾಯಕ ನನ್ನ ಗಂಡನಿಗಾಗಲೀ ಅಥವಾ ನನ್ನ ಮಾವ ಬಸವನಾಯಕವರಿಗಾಗಲೀ ಯಾವುದೇ ಜಮೀನನ್ನು ಮಾರಾಟ ಮಾಡಿರುವುದಿಲ್ಲ. ಸ.ನಂ. 168 ರಲ್ಲಿ ಒಟ್ಟು 03 ಎಕರೆ 28 ಗುಂಟೆ ಜಮೀನು ಇರುತ್ತದೆ. ನಿ.ಪಿ.-1 ನ್ನು ಕೊಮ್ಮನಾಯಕರವರ ವಾರಸುದಾರರು ಮಾಡಿಕೊಟ್ಟಿರುವುದಿಲ್ಲ. ನಿ.ಪಿ.-1 ರ ಮೂಲ ಪತ್ರ ನನ್ನ ಮನೆಯಲ್ಲಿರುತ್ತದೆ. ಅದನ್ನು ಹಾಜರುಪಡಿಸಲು ನನಗೇನು ತೊಂದರೆ ಇರುವುದಿಲ್ಲ. ಸ.ನಂ. 168 ರಲ್ಲಿರುವ ಜಮೀನಿನಲ್ಲಿ ಪ್ರತಿವಾದಿ ಎಷ್ಟು ವಿಸ್ತೀರ್ಣದ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ ಆದರೆ ನಾವು 02 ಎಕರೆ 07 ಗುಂಟೆ

ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದೇವೆ. ಸಾಕ್ಷಿಯು ಮುಂದುವರಿದು ಪ್ರತಿವಾದಿ ಅವರ ಜಮೀನಿನಲ್ಲಿ ಅವರು ವ್ಯವಸಾಯ ಮಾಡುತ್ತಿದ್ದಾರೆ ಮತ್ತು ನಮ್ಮ ಜಮೀನಿನಲ್ಲಿ ನಾವು ವ್ಯವಸಾಯ ಮಾಡುತ್ತಿದ್ದೇವೆಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಪೂರ್ವಕ್ಕೆ – ವೀರನಾಯಕರವರ ಜಮೀನು ಇರುತ್ತದೆ. ಸದರಿ ವೀರನಾಯಕರವರ ಜಮೀನಿನ ಸ.ನಂ. 169 ಆಗಿರುತ್ತದೆ. ದಾವಾ ಸ್ವತ್ತಿನ ಪಶ್ಚಿಮಕ್ಕೆ – ದೊಡ್ಡಚೆನ್ನನಾಯಕರವರ ಜಮೀನು ಇರುತ್ತದೆ, ಅದರ ಸರ್ವೆ ನಂ. ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಉತ್ತರಕ್ಕೆ – ಪಾರ್ವತಮ್ಮರವರ ಜಮೀನು ಮತ್ತು ರಸ್ತೆ ಇರುತ್ತದೆ ಮತ್ತು ದಕ್ಷಿಣಕ್ಕೆ – ಶಿವನಯ್ಯನ ಮಾದನಾಯಕನ ಜಮೀನು ಇರುತ್ತದೆ, ಅದರ ಸರ್ವೆ ನಂ. ನನಗೆ ಗೊತ್ತಿಲ್ಲ. ಪಾರ್ವತಮ್ಮರವರ ಜಮೀನಿನ ಸರ್ವೆ ನಂ. ನನಗೆ ಗೊತ್ತಿಲ್ಲ.

ಸ.ನಂ. 168 ರಲ್ಲಿ ನಾನೇ ವ್ಯವಸಾಯ ಮಾಡುತ್ತಿದ್ದೇನೆಂದು ತೋರಿಸಲು ದಾಖಲೆ ಹಾಜರುಪಡಿಸಿರುತ್ತೀರಾ ಎಂದು ಶುದ್ಧ ಕ್ರಯ ಪತ್ರ, ಪಟ್ಟಾ ಮತ್ತು ಇ.ಸಿ. ಯನ್ನು ಹಾಜರುಪಡಿಸಿರುತ್ತೇನೆ. ನಾನು ಪಟ್ಟಾ ಮತ್ತು ಇ.ಸಿ. ಯನ್ನು ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ. ದೊಡ್ಡಮರಚನಾಯಕರವರು ಮೃತಪಟ್ಟ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೀರಾ ಎಂದರೆ ಅವರು ಯಾವಾಗ ಮೃತಪಟ್ಟಿರುತಾರೆಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಬಸವನಾಯಕ ನನಗೆ ತಾತನಾಗಬೇಕು ಮತ್ತು ಅವರು ನೇರಳೆ ಗ್ರಾಮದವರು. ನಾನು ಮೂಲತಃ ಸಾಗರೆ ಗ್ರಾಮದವಳಾಗಿದ್ದು, ನನ್ನನ್ನು ನೇರಳೆ ಗ್ರಾಮದ ನನ್ನ ಸೋದರ ಮಾವನಿಗೆ ಮದುವೆ ಮಾಡಿಕೊಟ್ಟಿರುತ್ತಾರೆ. ನನ್ನ ತಾಯಿಯ ಚಿಕ್ಕಚೆನ್ನನಾಯಕ ಮತ್ತು ಶಿವನಾಯಕ ಎಂಬ ಸಹೋದರರಿದ್ದು, ನನ್ನ ತಾಯಿ ಮತ್ತು

ಚಿಕ್ಕಚೆನ್ನನಾಯಕ ಮೃತಪಟ್ಟಿರುತ್ತಾರೆ. ಸದರಿ ಶಿವನಾಯಕರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ಸದರಿ ಶಿವನಾಯಕರವರಿಗೆ ಸುಮಾರು 60–70 ವರ್ಷ ಪ್ರಾಯವಾಗಿದ್ದು, ಅವರು ನೇರಳೆ ಗ್ರಾಮದಲ್ಲಿ ವಾಸವಿರುತ್ತಾರೆ. ಶಿವನಾಯಕರವರು ಸಾಕ್ಷ್ಯ ನುಡಿಯುವಂತೆ ನನಗೆ ಅನುಮತಿ ನೀಡಿರುತ್ತಾರೆ. ವೆಂಕಟನಾಯಕ ಎಂಬುವವರು ನಿಲುವಾಗಿಲು ಗ್ರಾಮದವರು. ವೆಂಕಟನಾಯಕರವರಿಗೆ ಸ.ನಂ. 168 ರಲ್ಲಿ ಜಮೀನು ಬಂದಿರುವ ಬಗ್ಗೆ ನನಗೆ ಗೊತ್ತಿಲ್ಲ. ಸ.ನಂ. 168ರ ಜಮೀನು ವೆಂಕಟನಾಯಕರವರಿಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಸ.ನಂ. 168ರ ಜಮೀನು ಕೊಮ್ಮನಾಯಕರವರ ಕುಟುಂಬದ ಸ್ವತ್ತಾಗಿರುತ್ತದೆಂದರೆ ಸರಿಯಲ್ಲ. ಸ.ನಂ. 168 ರಲ್ಲಿರುವ 02 ಎಕರೆ 07 ಗುಂಟೆ ಜಮೀನು ಕೊಮ್ಮನಾಯಕರವರ ಕುಟುಂಬದಿಂದ ಬಿಳಿನಾಯಕರವರಿಗೆ ಬಂದಿದ್ದು, ಸದರಿ ಬಿಳಿನಾಯಕ ಮೃತಪಟ್ಟ ನಂತರ ಪ್ರತಿವಾದಿ ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬರುತ್ತಿದ್ದಾರೆಂದರೆ ಸರಿಯಲ್ಲ. ಬಿಳಿನಾಯಕ ಮೃತಪಟ್ಟ ನಂತರ ಪ್ರತಿವಾದಿ ತನ್ನ ಹೆಸರಿಗೆ ಪೌತಿ ಖಾತೆ ಮಾಡಿಸಿಕೊಂಡು ತನ್ನ ಮಕ್ಕಳ ಜೊತೆ ಸ್ವಾಧೀನ ಹೊಂದಿ, ಬೆಳೆ ಬೆಳೆದು, ಅನುಭವದಲ್ಲಿರುತ್ತಾರೆಂದರೆ ನಮ್ಮ ಜಮೀನಿನಲ್ಲಿ ನಾವು ಸ್ವಾಧೀನದಲ್ಲಿರುತ್ತೇವೆ. ಬಿಳಿನಾಯಕ ಮತ್ತು ಪ್ರತಿವಾದಿಯ ಹೆಸರಿನಲ್ಲಿರುವ ಕಂದಾಯ ದಾಖಲೆಗಳನ್ನು ಪ್ರಶ್ನಿಸಿ ನಾನು ತಹಸೀಲ್ದಾರ್ ರವರಿಗೆ ಅರ್ಜಿ ಸಲ್ಲಿಸಿದಾಗ ತಹಸೀಲ್ದಾರ್ ರವರು ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ಹೇಳಿರುತ್ತಾರೆ. ಸದರಿ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದಾವಾ ಸ್ವತ್ತಿನಲ್ಲಿ ಬೋರ್ ವೆಲ್ ಹಾಕಿಸಿರುತ್ತೇನೆಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿಲ್ಲ. ಪ್ರತಿವಾದಿಯ ಜಮೀನಿನಲ್ಲಿ ಬೋರ್ ವೆಲ್ ಇರುತ್ತದೆ ಎಂದರೆ ಅವರ ಜಮೀನು ಮತ್ತು ನಮ್ಮ

ಜಮೀನಿನಲ್ಲಿಯೂ ಇರುತ್ತದೆ. ಪ್ರತಿವಾದಿ 02 ಎಕರೆ 07 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಬ್ಯಾಂಕ್ ನಿಂದ ಸಾಲ ಪಡೆದು ಜಮೀನನ್ನು ಅಭಿವೃದ್ಧಿಪಡಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗು ಮತ್ತು ನಮಗು ಯಾವುದೇ ಸಂಬಂಧವಿಲ್ಲದಿದ್ದರು ಪ್ರತಿವಾದಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿ ಸ.ನಂ. 168/2 ಕ್ಕೆ ಸಂಬಂಧಿಸಿದಂತೆ ಖಾತೆ ಮಾಡಿಸಿಕೊಂಡಿರುವ ವಿಚಾರ 10 ವರ್ಷಗಳ ಹಿಂದೆ ಬೋರ್ ವೆಲ್ ಹಾಕಿಸುವಾಗ ಗೊತ್ತಾಗಿರುತ್ತದೆ. ಆ ರೀತಿ ಖಾತೆಯಾಗಿರುವ ವಿಚಾರ ಗೊತ್ತಾದ ನಂತರ ಪ್ರಶ್ನೆ ಮಾಡಿರುತ್ತೀರಾ ಎಂದರೆ ಗ್ರಾಮದಲ್ಲಿ ಪಂಚಾಯಿತಿ ಸೇರಿಸಿದಾಗ ಅವರು ಒಪ್ಪಿರುವುದಿಲ್ಲ. ಸದರಿ ಪಂಚಾಯಿತಿಯಲ್ಲಿ ಶಿವಪ್ಪಗೌಡರು, ರಾಜೇಗೌಡರು ಮತ್ತು ವೆಂಕಟಸ್ವಾಮಿನಾಯಕ ಸೇರಿದ್ದರು. ಪಂಚಾಯಿತಿಯಲ್ಲಿ ಯಾವುದೇ ಬರವಣಿಗೆ ಮಾಡಿರುವುದಿಲ್ಲ. ಈ ರೀತಿ ಪಂಚಾಯಿತಿ ಸೇರಿಸಿದ್ದೆವು ಎಂದು ದಾವೆಯಲ್ಲಿ ಹೇಳಿರುತ್ತೇನೆ. ನಾವು ಯಾವುದೇ ಪಂಚಾಯಿತಿ ಸೇರಿಸಿರುವುದಿಲ್ಲ ಮತ್ತು ದಾವಾ ಸ್ವತ್ತಿಗು ನಮಗು ಯಾವುದೇ ಸಂಬಂಧ ಇರುವುದಿಲ್ಲವೆಂದರೆ ಸರಿಯಲ್ಲ. ಪುಟ್ಟಮ್ಮ ದಾವೆ ಸಲ್ಲಿಸಿರುವ ವಿಚಾರವನ್ನು ಯಾವಾಗ ತಿಳಿಸಿರುತ್ತಾರೆಂದರೆ ನಮ್ಮ ಜೊತೆಯಲ್ಲಿಯೇ ಅವರನ್ನು ಕರೆದುಕೊಂಡು ಬಂದಿದ್ದೆವು. ಸ.ನಂ. 168 ರ ಜಮೀನನ್ನು ನನಗಾಗಲೀ ಅಥವಾ ನನ್ನ ತಾಯಿಗಾಗಲೀ ಬರೆದುಕೊಟ್ಟಿರುತ್ತಾರಾ ಎಂದರೆ ನನ್ನ ತಾತನ ಹೆಸರಿಗೆ ಬಂದಿರುತ್ತದೆ. ನನ್ನ ತಾತ ನನಗಾಗಲೀ ಅಥವಾ ನನ್ನ ತಾಯಿಗಾಗಲೀ ಸ.ನಂ.168 ರ ಜಮೀನನ್ನು ಬರೆದುಕೊಟ್ಟಿರುವುದಿಲ್ಲ. ದೊಡ್ಡಮರಚನಾಯಕರವರು ಬಸವನಾಯಕರವರಿಗೆ ಯಾವುದೇ ಪತ್ರ ಬರೆದುಕೊಟ್ಟಿಲ್ಲ ಆದರೆ ಬಸವನಾಯಕರವರೇ ಜಮೀನನ್ನು

ಖರೀದಿಸಿರುತ್ತಾರೆ. ಬಸವನಾಯಕರವರು ಯಾರಿಗೂ ಪತ್ರವನ್ನು ಬರೆದುಕೊಟ್ಟಿಲ್ಲ. ಬಸವನಾಯಕರವರು ದಾವಾ ಸ್ವತ್ತು ತನಗೆ ಸೇರಿರುತ್ತದೆ ಎಂದು ಪಹಣಿ ಮಾಡಿಸಿಕೊಂಡಿದ್ದರು ಆದರೆ ಅದು ಕಳೆದು ಹೋಗಿರುತ್ತದೆ, ಅದರ ಪಟ್ಟಾ ಇರುತ್ತದೆ. ಒಂದು ವೇಳೆ ಪಹಣಿಯಲ್ಲಿ ಅವರ ಹೆಸರು ಇದ್ದರೆ ಕಂದಾಯ ಇಲಾಖೆಯಲ್ಲಿ ಅದು ಲಭ್ಯವಿದ್ದು, ಅದನ್ನು ತಂದು ಹಾಜರುಪಡಿಸಲು ನಿಮಗೆ ತೊಂದರೆ ಇದೆಯಾ ಎಂದರೆ ಅದನ್ನು ಹಾಜರುಪಡಿಸಲಾಗುವುದಿಲ್ಲ. ನಾನು ಹೇಳಿದಂತೆ ಅಂತಹ ಯಾವುದೇ ಖಾತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸ.ನಂ. 168ರ ಜಮೀನನ್ನು ಮಾರಾಟ ಮಾಡಿದ್ದರೆ ಅಂತಹ ಮಾರಾಟಗಾರರಿಗೆ ಯಾವುದೇ ಹಕ್ಕು ಇರಲಿಲ್ಲವೆಂದರೆ ಸರಿಯಲ್ಲ. ಏಕೆಂದರೆ ಸ.ನಂ. 168ರ ಆಸ್ತಿ ಮೂಲತಃ ಕೊಮ್ಮನಾಯಕರವರ ಕುಟುಂಬಕ್ಕೆ ಸೇರಿದ ಸ್ವತ್ತಾಗಿರುತ್ತದೆಂದರೆ ಸರಿಯಲ್ಲ. ಅದಕ್ಕೆ ಸಂಬಂಧಿಸಿದಂತೆ ದಾಖಲೆಗಳಿರುತ್ತವೆ ಎಂದರೆ ನನ್ನ ಬಳಿಯೂ ಇರುತ್ತವೆ. ನಾವು ಯಾವತ್ತೂ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿಲ್ಲ ಮತ್ತು ಪ್ರತಿವಾದಿ ವ್ಯವಸಾಯ ಮಾಡುತ್ತಿರುವ ಜಮೀನನ್ನು ಕಬಳಿಸುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಸ.ನಂ. 168/1 ರಲ್ಲಿರುವ 04 ಗುಂಟೆ ಕರಾಬು ಜಮೀನನ್ನು ಒಳಗೊಂಡಂತೆ 02 ಎಕರೆ 06 ಗುಂಟೆ ಜಮೀನಿಗೆ ಪ್ರತಿವಾದಿ ಮಾಲೀಕರಾಗಿ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ಸದರಿ ಸ್ವತ್ತು ಪ್ರತಿವಾದಿಗೆ ತನ್ನ ಗಂಡ ಬಿಳಿನಾಯಕರವರಿಂದ ಬಂದ ಸ್ವತ್ತಾಗಿರುತ್ತದೆಂದರೆ ಸರಿಯಲ್ಲ. ಬಿಳಿನಾಯಕರವರ ತಂದೆ ಶಿಂಗನಾಯಕ ಎಂದರೆ ನನಗೆ ಗೊತ್ತಿಲ್ಲ. ಸ.ನಂ. 168/1ರಲ್ಲಿರುವ 02 ಎಕರೆ 06 ಗುಂಟೆ ಜಮೀನು ಬಿಳಿನಾಯಕರವರ ಸ್ವತ್ತಾಗಿದ್ದು, ಅವರು ಮೃತಪಟ್ಟ ನಂತರ ಪ್ರತಿವಾದಿ ಪೌತಿ ಖಾತೆ ಮಾಡಿಸಿಕೊಂಡು ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ.

ಬಿಳಿನಾಯಕರವರು ಬದುಕಿರುವವರೆಗು ಅವರೇ ವ್ಯವಸಾಯ ಮಾಡಿಕೊಂಡು ಬರುತ್ತಿದ್ದರು ಎಂದರೆ ಅವರ ಜಮೀನನ್ನು ಅವರು ವ್ಯವಸಾಯ ಮಾಡುತ್ತಿದ್ದರು ಮತ್ತು ನಮ್ಮ ಜಮೀನನ್ನು ನಾವು ವ್ಯವಸಾಯ ಮಾಡುತ್ತಿದ್ದೆವು. ಪ್ರತಿವಾದಿಯ ಜಮೀನಿನ ಸ.ನಂ. ನನಗೆ ಗೊತ್ತಿಲ್ಲ. ಪ್ರತಿವಾದಿಯ ಜಮೀನಿನ ಪೂರ್ವಕ್ಕೆ – ವೆಂಕಟನಾಯಕರವರ ಜಮೀನು, ಪಶ್ಚಿಮಕ್ಕೆ – ದೊಡ್ಡಚೆನ್ನನಾಯಕರವರ ಜಮೀನು, ಉತ್ತರಕ್ಕೆ – ರಸ್ತೆ ಮತ್ತು ದಕ್ಷಿಣಕ್ಕೆ – ನಮ್ಮದೇ ಜಮೀನು ಇರುತ್ತದೆ. ವಾದ ಪತ್ರದ ಚೆಕ್ ಬಂದಿಯಲ್ಲಿ ಉತ್ತರಕ್ಕೆ ಪ್ರತಿವಾದಿಯ ಜಮೀನು ಇರುತ್ತದೆಂದು ತೋರಿಸಿಲ್ಲ. ನಾನು ಸುಳ್ಳು ಚೆಕ್ ಬಂದಿಯನ್ನು ನಮೂದಿಸಿ ಪ್ರತಿವಾದಿಯ ಜಮೀನನ್ನು ಕಬಳಿಸಬೇಕೆಂಬ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಮಗು ಮತ್ತು ಪ್ರತಿವಾದಿಗೆ ಸೇರಿದ 02 ಎಕರೆ 06 ಗುಂಟೆ ಜಮೀನಿಗು ಯಾವುದೇ ಸಂಬಂಧವಿಲ್ಲವೆಂದರೆ ನಾವೇ ಸ್ವಾಧೀನದಲ್ಲಿರುತ್ತೇವೆ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**